**ಸಾಕ್ಷಿಯನ್ನು ದಿನಾಂಕಃ 22.07.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು – ಶ್ರೀ ಡಿ.ಎಸ್.ಜಿ. ವಕೀಲರಿಂದ ಪ್ರತಿವಾದಿ ಪರವಾಗಿ :**

1. ನಾನು ಬಿ.ಇ. ಪದವೀಧರ ಎಂದರೆ ಸರಿ. ನಾನು ಕೃಷಿ ಮಾಡಿಕೊಂಡು ಸಿವಿಲ್ ಕಂಸಲ್ಟೇಷನ್ ಕೆಲಸ ಮಾಡುತ್ತೇನೆ. ನನ್ನ ಹೆಸರಿನಲ್ಲಿ ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿ, ಅನರಾಯನಪುರ ಗ್ರಾಮದಲ್ಲಿ ಜಮೀನು ಇರುತ್ತದೆ. ನನಗೆ ಪ್ರತಿವಾದಿಯು ಸುಮಾರು 25 ವರ್ಷಗಳಿಂದ ಪರಿಚಯ ಇದ್ದಾರೆ. ಪ್ರತಿವಾದಿಯು ಲ್ಯಾಂಡ್ ಸ್ಟೋನ್ ಕಟ್ಟಡದಲ್ಲಿ ಬೆರಳಚ್ಚುಗಾರರಾಗಿ ಕೆಲಸ ಮಾಡುತ್ತಿದ್ದು, ನಾನು ನನ್ನ ಕೆಲಸದ ನಿಮಿತ್ತ ಅವರ ಬಳಿ ಹೋಗುತ್ತಿದ್ದೆ. ಸುಮಾರು 25 ವರ್ಷಗಳ ಹಿಂದೆ ಪ್ರತಿವಾದಿ ಎಲ್ಲಿ ವಾಸ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯವರು ಮೈಸೂರಿನಲ್ಲಿ ಯಾವ ವರ್ಷ ಮತ್ತು ಎಲ್ಲಿ ವಾಸ ಇದ್ದರು ಎಂದು ನನಗೆ ಗೊತ್ತಿಲ್ಲ.

2. ನಾನು ಮೈಸೂರಿನ ಟಿ.ಕೆ. ಲೇಔಟ್ ನ ಜನತಾ ನಗರದಲ್ಲಿ ಕಳೆದ 30 ವರ್ಷಗಳಿಂದ ವಾಸ ಇದ್ದೇನೆ. ಪ್ರತಿವಾದಿಯು ಜನತಾ ನಗರದ 4ನೇ ಕ್ರಾಸ್ ನಲ್ಲಿ 2005 ರಿಂದ ವಾಸವಾಗಿದ್ದರು. ನಾನು 2005 ರಿಂದ ಪ್ರತಿವಾದಿಯ ಮನೆಗೆ ಸುಮಾರು 3 – 4 ಸಲ ಹೋಗಿರುತ್ತೇನೆ. ಪ್ರತಿವಾದಿಗೆ ಹೆಂಡತಿ ಮತ್ತು ಇಬ್ಬರು ಮಕ್ಕಳು ಇರುವ ಬಗ್ಗೆ ನನಗೆ ಗೊತ್ತು. ಉಳಿದ ಅವರ ಕುಟುಂಬದ

ವಿಷಯ ನನಗೆ ಗೊತ್ತಿಲ್ಲ.

3. 2013ನೇ ಇಸವಿಯಲ್ಲಿ ಪ್ರತಿವಾದಿಯು ಎಲ್ಲಿ ವಾಸವಾಗಿದ್ದರು ಎಂದು ನನಗೆ ಗೊತ್ತಿಲ್ಲ, ಆದರೆ ಪ್ರತಿವಾದಿಯು 2013 ರಿಂದ ಆಗಾಗ ಮನೆ ಬದಲಾವಣೆ ಮಾಡುತ್ತಿದ್ದರು. ನಾನು 2013 ರಲ್ಲಿ ಪ್ರತಿವಾದಿ ಎಲ್ಲಿ ವಾಸವಾಗಿದ್ದರು ಎಂದು ಕೇಳಿ ತಿಳಿದುಕೊಳ್ಳಲು ಅವರನ್ನು ವಿಚಾರಿಸಿದ್ದೇನೆ. ಆ ಸಂದರ್ಭದಲ್ಲಿ ಪ್ರತಿವಾದಿಯು ವಿಜಯನಗರದ 3ನೇ ಹಂತದ ಸುಬ್ರಹ್ಮಣ್ಯ ನಗರದಲ್ಲಿ ವಾಸವಾಗಿದ್ದೇನೆ ಎಂದು ನನಗೆ ತಿಳಿಸಿರುತ್ತಾರೆ.

4. ನಾನು ಪ್ರತಿವಾದಿಯ ತಂದೆಯ ಹೆಸರನ್ನು ಕೇಳಿದಾಗ ಅವರು ಮಹದೇವಪ್ಪ ಎಂದು ತಿಳಿಸಿರುತ್ತಾರೆ. ಪ್ರತಿವಾದಿಯ ಹೆಸರನ್ನು ಕೇಳಿದಾಗ ತನ್ನ ಹೆಸರು ಮಹದೇವಪ್ಪ ತಿಳಿಸಿ, ಮಹದೇವು ಎಂತಲೂ ಕೂಡ ಕರೆಯುತ್ತಾರೆ ಎಂದು ತಿಳಿಸಿರುತ್ತಾರೆ. ಪ್ರತಿವಾದಿ ಈ ದಾವೆಯಲ್ಲಿ ತನ್ನ ಲಿಖಿತ ಹೇಳಿಕೆಯನ್ನು ಸಲ್ಲಿಸಿದ ಮೇಲೆ ನನಗೆ ಅವರ ತಂದೆಯ ಹೆಸರು ಗಂಗಣ್ಣ ಎಂದು ಗೊತ್ತಾಯಿತು ಎಂದರೆ ಸರಿ. ಪ್ರತಿವಾದಿಯು ಲ್ಯಾಂಡ್ ಸ್ಟೋನ್ ಕಟ್ಟಡದಲ್ಲಿ ಬೆರಳಚ್ಚುಗಾರರಾಗಿ ಕೆಲಸ ಮಾಡುತ್ತಿದಾಗ ಅವರ ತಮ್ಮ ಮಂಜುನಾಥರವರು ಅಲ್ಲಿಯೇ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ

ಎಂದು ಉತ್ತರಿಸುತ್ತಾರೆ. ನಾನು 2012-13 ರಲ್ಲಿ ಪ್ರತಿವಾದಿಯು ವಾಸಿಸುತ್ತಿದ್ದ ವಿಜಯನಗರದ 3ನೇ ಹಂತದ ಸುಬ್ರಹ್ಮಣ್ಯ ನಗರಕ್ಕೆ ಹೋಗಿರುತ್ತೇನೆ. ನಾನು ಆ ಸಂದರ್ಭದಲ್ಲಿ ಪ್ರತಿವಾದಿಯ ತಂದೆಯನ್ನು ಮಾತನಾಡಿಸಿರುವುದಿಲ್ಲ. ಪ್ರತಿವಾದಿಯ ಆತ್ಮೀಯ ಸ್ನೇಹಿತರ ಪರಿಚಯ ನನಗೆ ಇರುವುದಿಲ್ಲ.

5. ಪ್ರತಿವಾದಿಯು 2010 ರ ನಂತರ ಮುಡಾದಲ್ಲಿ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಆ ಸಂದರ್ಭದಲ್ಲಿಯು ಕೂಡ ನಾನು ಪ್ರತಿವಾದಿಯನ್ನು ಭೇಟಿ ಮಾಡಿರುತ್ತೇನೆ. ಪ್ರತಿವಾದಿ ಮೂಲತಃ ಮೈಸೂರು ತಾಲೂಕಿನ ಮುರುಡಗಳ್ಳಿ ಗ್ರಾಮವದವರು ಆಗಿರುತ್ತಾರೆ. ನಾನು ಮುರುಡಗಳ್ಳಿ ಗ್ರಾಮದಲ್ಲಿ ಪ್ರತಿವಾದಿಯನ್ನು ಭೇಟಿ ಮಾಡಿರುವುದಿಲ್ಲ.

**ಶ್ರೀ ಡಿ.ಎಸ್.ಜಿ. ವಕೀಲರು ಮುದಿನ ಪಾಟಿಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ, ಆದ್ದರಿಂದ ಸಮಯ ನೀಡಿ, ಮುಂದುವರೆದ ಪಾಟಿಸವಾಲಿಗಾಗಿ ಮುಂದೂಡಲಾಯಿತು.**

**ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ. ಹೇ. ಕೇ. ಸ. ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಸಿ.ಜೆ.ಎಂ., ಮೈಸೂರು.**